# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 119/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀಮತಿ ರಶ್ಮಿ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಜೈಶಂಕರ್ | | **11.09.2023** |
| **ವಯಸ್ಸು** | ಃ 32 ವರ್ಷ | | |
| **ವೃತ್ತಿ** | ಃ ಗೃಹಿಣಿ | **ಪ್ರಾ.ಸಾ.** | ಃ **04** |
| **ವಾಸಸ್ಥಳ** | ಃ ಮೈಸೂರು | **ಚಾ.ಸಾ.** | ಃ **05** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನನ್ನ ತಂದೆ ಲೇ.ನಾಗರಾಜು ಇವರು ಶಿವಪ್ರಕಾಶ್ ಇವರ ಟ್ರಾವೆಲ್ಸ್ ನಲ್ಲಿ ಪಾಲುದಾರಿಕೆ ಮೇಲೆ ಡ್ರೈವರ್ ಕೆಲಸ ಮಾಡುತ್ತಿದ್ದರು. ನನ್ನ ತಂದೆ *2006* ರಲ್ಲಿ ಮರಣಹೊಂದಿದ್ದರು. ನನ್ನ ತಂದೆ ಮರಣದ ಬಳಿಕ ಶಿವಪ್ರಕಾಶ್ ಇವರೇ ನಮ್ಮ ಮನೆ ಜವಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು. ಶಿವಪ್ರಕಾಶ್ ಇವರು ನನ್ನಗೆ ಪಿ.ಯು.ಸಿ ವರೆಗೆ ಓದಿಸಿ ಮದುವೆ ಮಾಡಿಸಿದ್ದರು. ನನ್ನ ತಂಗಿ ಮತ್ತು ತಮ್ಮನಿಗೆ ಹತ್ತನೇ ತರಗತಿವರೆಗೆ ಓದಿಸಿದ್ದರು. ಶಿವಪ್ರಕಾಶ್ ಇವರು ಮುಂದೆ ನಿಂತು ಜವಬ್ದಾರಿ ನಿರ್ವಹಿಸಿದ್ದರು ಆದರೆ ಅವರು ಯಾವುದೇ ಖರ್ಚು ವೆಚ್ಚಗಳನ್ನು ನೊಡಿಕೊಂಡಿರಲಿಲ್ಲ. ಶಿವಪ್ರಕಾಶ್ ಇವರಿಗೆ ನನ್ನ ತಂದೆ *4* ಲಕ್ಷ ಹಣವನ್ನು ಕೊಟ್ಟಿದ್ದರು. ನನ್ನ ತಾಯಿಯ ಹತ್ತಿರದ ಸ್ವಲ್ಪ ಹಣ, ನನ್ನ ತಂಗಿಯ ಗಂಡನಿಂದ ಪಡೆದ *2* ಲಕ್ಷ ರೂಪಾಯಿ ಹಣ ಮತ್ತು ನನ್ನ ತಮ್ಮ ಸಾಲ ಪಡೆದ ಸ್ವಲ್ಪ ಹಣ ಸೇರಿಸಿ ಶಿವಪ್ರಕಾಶ್ ಇವರಿಗೆ ಕೊಟ್ಟು ಅವರ ಸೈಟನ್ನು ಖರೀದಿ ಮಾಡಿ ನನ್ನ ತಾಯಿ ಮತ್ತು ತಮ್ಮ ಸೇರಿ ಶ್ರೀನಗರದಲ್ಲಿ ಮನೆ ಕಟ್ಟಿಸಿದ್ದರು. ಶಿವಪ್ರಕಾಶ್ ಇವರು ನಮಗೆ ಸಹಾಯ ಮಾಡುತ್ತಿದ್ದ ಬಗ್ಗೆ ಅವರ ಮನೆಯವರಿಗೆ

ಗೊತ್ತಿತ್ತು. ಶಿವಪ್ರಕಾಶ್ ಇವರು ತನ್ನ ಮಗ ಸಾಗರ್ ಸಾಲ ಮಾಡಿಕೊಂಡ ಬಗ್ಗೆ ಮತ್ತು ಅವರ ಕುಟುಂಬದವರು ಶಿವಪ್ರಕಾಶ್ ಇವರು ನಮಗೆ ಸಹಾಯ ಮಾಡುತ್ತಿದ್ದನ್ನು ಪ್ರಶ್ನೆ ಮಾಡಿ ಅವರಿಗೆ ಯಾಕೆ ಹಣ ಕೊಡುತ್ತೀಯಾ ಎಂದು ಕೇಳುತ್ತಿದ್ದ ಬಗ್ಗೆ ನಮ್ಮ ಬಳಿ ಹೇಳುತ್ತಿದ್ದರು.

*2.* ದಿಃ*21.10.2021* ರಂದು ರಾತ್ರಿ *9.50* ರಿಂದ *10* ಗಂಟೆ ಸಮಯಕ್ಕೆ ನನ್ನ ತಾಯಿಯ ಮನೆ ಎದುರುಗಡೆ ಇರುವ ಶಾರದಮ್ಮ ಎನ್ನುವವರು ನನಗೆ ಪೋನ್ ಮಾಡಿ ಶಿವಪ್ರಕಾಶ್ ಇವರ ಮಗ ಸಾಗರ ನಿಮ್ಮ ಮನೆ ಬಳಿ ಬಂದು ಗಲಾಟೆ ಮಾಡುತ್ತಿದ್ದಾನೆ ಎಂದು ಹೇಳಿದ್ದರು. ಆ ಕೂಡಲೇ ನಾನು ಮತ್ತು ನನ್ನ ಗಂಡ ಮತ್ತು ಮಗಳು ನಮ್ಮ ಮನೆಯಿಂದ ಹೊರಟಿದ್ದೇವು. ನಾವು ಹೋಗುವಾಗಲೇ ನನ್ನ ತಂಗಿ ಸಹ ಪೋನ್ ಮಾಡಿ ಹೇಳಿದ್ದರು. ಆಗ ನಾವು ನಮ್ಮ ತಾಯಿಯ ಮನೆ ಬಳಿ ಹೋಗಿ ಮನೆಯ ಒಳಗೆ ಹೊಗುತ್ತಿರುವಾಗ ನನ್ನ ತಮ್ಮ ಮನೆಯ ಹೊರಭಾಗದಲ್ಲಿ ಬಿದ್ದಿದ್ದ ಶಿವಪ್ರಕಾಶ್ ಮತ್ತು ಎಡಭಾಗದಲ್ಲಿ ಬಿದ್ದಿದ್ದ ನನ್ನ ತಾಯಿಯನ್ನು ತೋರಿಸಿದ್ದ. ಆ ಕಾಲಕ್ಕೆ ನನ್ನ ತಮ್ಮನ ಎಡಗೈಗೆ ಪೆಟ್ಟಾಗಿತ್ತು. ಆತನ ಎಡ ಕಿವಿ ಮತ್ತು ತಲೆಗೂ ಸಹ ಪೆಟ್ಟಾಗಿತ್ತು. ನಾವು ಹೊಗುವಷ್ಟರಲ್ಲಿ ಶಿವಪ್ರಕಾಶ್ ಮತ್ತು ನನ್ನ ತಾಯಿ ಮರಣಹೊಂದಿದ್ದರು. ಆ ಕೂಡಲೇ ನಾವು ನನ್ನ ತಮ್ಮನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವು.

*3.* ಆ ಕಾಲಕ್ಕೆ ನಾವು ನನ್ನ ತಮ್ಮನನ್ನು ವಿಚಾರಿಸಿದಾಗ ಆ ದಿನ ರಾತ್ರಿ *8.30* ರ ಸಮಯದಲ್ಲಿ ನನ್ನ ತಮ್ಮ, ತಾಯಿ ಮತ್ತು ಶಿವಪ್ರಕಾಶ್ ಮಾತನಾಡುತ್ತಾ ಕುಳಿತಿರುವುದಾಗಿಯೂ ನಂತರ *9.30* ಕ್ಕೆ ಶಿವಪ್ರಕಾಶ್ ಇವರು ಮನೆಗೆ ಹೋಗುವುದಾಗಿ ಹೊರಗಡೆ ಬಂದಿರುವುದಾಗಿಯೂ ನಂತರ ನನ್ನ ತಾಯಿ ನಾಯಿ ಹಿಡಿದುಕೊಂಡು ಮನೆಯಿಂದ ಹೊರಗಡೆ

ಬಂದಿರುವುದಾಗಿಯೂ ಸ್ವಲ್ಪ ಹೊತ್ತಿನ ಬಳಿಕ ನನ್ನ ತಮ್ಮ ಮನೆಯಿಂದ ಹೊರಗಡೆ ಬಂದಾಗ ಶಿವಪ್ರಕಾಶ್ ಇವರನ್ನು ಅವರ ಮಗ ಮನೆಗೆ ಹೊಗೋಣ ಬಾ ಎಂದು ಕರೆದಾಗ ಅವರು ಹೊಗದೇ ಇದ್ದಾಗ ಶಿವಪ್ರಕಾಶ್ ಇವರ ಮಗ ಶಿವಪ್ರಕಾಶ್ ಇವರಿಗೆ ಮಚ್ಚಿನಲ್ಲಿ ಹೊಡೆದಿದ್ದಾಗ್ಯೂ ಆ ಕಾಲಕ್ಕೆ ಬಿಡಿಸಲು ಹೋದ ನನ್ನ ತಾಯಿಗೂ ಸಹ ಸಾಗರ್ ನು ಮಚ್ಚಿನಲ್ಲಿ ಹೊಡೆದಿದ್ದಾಗ್ಯೂ ನಂತರ ಅವರಿಬ್ಬರು ಪುಟ್ ಪಾತ್ ಮೇಲೆ ಒನ್ನೊಂದು ಬದಿಗೆ ಬಿದಿದ್ದಾಗ್ಯೂ ಆ ಕಾಲಕ್ಕೆ ಬಿಡಿಸಲು ಹೋದ ನನ್ನ ತಮ್ಮನಿಗೆ ಮಚ್ಚಿನಿಂದ ಹೊಡೆದಿದ್ದಾಗ್ಯೂ ಆ ಕಾಲಕ್ಕೆ ನನ್ನ ತಮ್ಮ ಹೆದರಿಕೊಂಡು ಓಡಿಹೋಗಿ ಎದುರುಗಡೆ ಮನೆ ಆಂಟಿಯಿಂದ ಪೋನ್ ಮಾಡಿಸಿದ್ದಾಗಿ ಹೇಳಿದ್ದ. ನಂತರ ನನ್ನ ತಮ್ಮ ಶಾರದಮ್ಮ ನ ಕಡೆಯಿಂದ ಪೋನ್ ಮಾಡಿಸಿ ಬಂದಾಗಲೂ ಸಾಗರ್ ನು ನನ್ನ ತಾಯಿಗೆ ಮತ್ತು ಶಿವಪ್ರಕಾಶ್ ಅವರಿಗೆ ಮಚ್ಚಿನಿಂದ ಹೊಡೆದಿದ್ದಾಗಿ ಹೇಳಿದ್ದ. ನನ್ನ ತಾಯಿಗೂ ಮತ್ತು ಶಿವಪ್ರಕಾಶ್ ಇವರಿಗೆ ಸಂಬಂದ ಇದೆ ಎನ್ನುವ ಸಂಶಯದಿಂದ ಸಾಗರ್ ಆ ರೀತಿ ಹೊಡೆದಿದ್ದಾನೆ ಎಂದು ನಂತರ ನನಗೆ ಗೊತ್ತಾಗಿತ್ತು. ಹೊಡೆದ ಬಳಿಕ ಸಾಗರ್ ನು ತಾನು ಬಂದಿದ್ದ ಡಿಯೋ ಬೈಕ್ ನಲ್ಲಿ ಮಚ್ಚನ್ನು ತೆಗೆದುಕೊಂಡು ಹೊರಟು ಹೊಗಿದ್ದಾಗಿ ನನ್ನ ತಮ್ಮ ಹೇಳಿದ್ದ. ಪೋಲೀಸರ ಮುಂದೆ ಈ ರೀತಿ ಹೇಳಿಕೆ ಕೊಟ್ಟಿದ್ದೆ. ನಾನು ಸಾಗರ್ ನನ್ನು ಈ ಮೊದಲು ಯಾವತ್ತು ನೋಡಿಲ್ಲ ಆದರೆ ಪೊಟೋದಲ್ಲಿ ನೋಡಿದ್ದೆ. ಈಗ ವಿಡಿಯೋ ಕಾನ್ಪರೆನ್ಸ್ ನಲ್ಲಿ ಹಾಜರು ಪಡಿಸಿರುವ ವ್ಯಕ್ತಿ ಆ ಸಾಗರ್ ಇರತ್ತಾರೆ.

***<u>ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.</u>***

<u>*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*</u>

*4.* ನನಗೆ ಶಿವಪ್ರಕಾಶ್ ಇವರ ಸಾಗರ್ ಚೆನ್ನಾಗಿ ಗೊತ್ತು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಸಾಗರ್ ಚೆನ್ನಾಗಿ ಗೊತ್ತು ಎಂದು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ–*19* ಎಂದು ಗುರುತಿಸಿದೆ.

**ಈ ವೇಳೆಗೆ ಆರೋಪಿತನ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಞ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು